**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 4514/2021 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಶ್ರೀಶೈಲ |
| ತಂದೆಃ ಗಂಡ | ಃ | ರಾಮಚಂದ್ರ |
| ವಯಸ್ಸು | ಃ | ೩೫ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಕೊಡಲಹಂಗರಗಾ |

ದಿನಾಂಕಃ೧೫.೦೨.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-10 ನನ್ನ ಸಹೋದರ, ಚಾಸಾ-2 ರಿಂದ 9 ರವರ ಪರಿಚಯ ಇರುತ್ತದೆ. ಅಪಘಾತದಲ್ಲಿ ಮೃತ ಅವ್ವಮ್ಮಾ ಗಂಡ ರಾಮಚಂದ್ರ ಮೇಲಿನಕೇರಿ ನನ್ನ ತಾಯಿ ಆಗಬೇಕು.

ನಾನು ಹೋಗುವಷ್ಟರಲ್ಲಿ ಅಪಘಾತವಾಗಿರುತ್ತದೆ. ಅಪಘಾತ ಯಾರುಪಡಿಸಿದರು, ಹೇಗೆ ಪಡಿಸಿದರು ಎಂದು ನನಗೆ ಗೊತ್ತಿಲ್ಲ. ಅಪಘಾತದ ವಿಷಯವನ್ನು ನನಗೆ ಚಾಸಾ-7 ರವರು ತಿಳಿಸಿರುತ್ತಾರೆ. ಸಾಕ್ಷಿ ಪಿರ್ಯಾದಿಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-1 ಎಂದು ಸಹಿಯನ್ನು ನಿಪಿ-೧ (ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ**

ದಿ.16.11.2020 ರಂದು ನಾನು ನನ್ನ ಗೆಳೆಯರಾದ ಚಾಸಾ-11 ರಿಂದ 13 ರವರು ಬಸ್ ನಿಲ್ದಾಣದ ಬಳಿ ಮಾತನಾಡುತ್ತಾ ನಿಂತಿರುತ್ತೇವೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ನಾನು ನಿಂತಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-7 ಗಾಭರಿಯಾಗಿ ಓಡುತ್ತಾ ಬಂದು ಅಪಘಾತದ ವಿಷಯವನ್ನು ನನಗೆ ತಿಳಿಸಿದರು ಎಂದರೆ ಸರಿ. ನಾನು ಮತ್ತು ಚಾಸಾ-11 ರಿಂದ 13 ರವರು ಓಡುತ್ತಾ ಅಪಘಾತವಾದ ಸ್ಥಳಕ್ಕೆ ಹೋದೆವು ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ನಾನು ಮೊದಲು ಹೋದೆನು ನಂತರ ಅವರು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ಬಹಿರ್ದೆಸೆಗೆ ಹೋದಾಗ ಕೆ.ಎ.-05-ಎಂ.ಸಿ.0130 ದ ಕಾರ್ ಚಾಲಕನು ಅತಿ ಜೋರಾಗಿ ನಿರ್ಲಕ್ಷತದಿಂದ ಓಡಿಸಿಕೊಂಡು ಬಂದು ನನ್ನ ತಾಯಿಗೆ ಅಪಘಾತಪಡಿಸಿರುತ್ತಾನೆ ಎಂದರೆ ಸರಿ. ಸದರಿ ಅಪಘಾತದಿಂದ ನನ್ನ ತಾಯಿಗೆ ಎಡಕಿವಿಗೆ ರಕ್ತಗಾಯ, ಎಡಗೈ ಮುಂಗೈ ಹತ್ತಿರ ರಕ್ತಗಾಯ, ಎಡಗಾಲಿನ ಮೊಳಕಾಲು ಮುರಿದಿರುತ್ತದೆ ಎಂದರೆ ಸರಿ. ಸ್ಥಳದಲ್ಲಿಯೇ ನನ್ನ ತಾಯಿ ಮೃತರಾಗಿರುತ್ತಾರೆ ಎಂಧರೆ ಸರಿ. ಆರೋಪಿಯ ಮುಖ

ಪರಿಚಯ ಇರುವುದಿಲ್ಲ, ಆದರೆ ರಾಹುಲ್ ಎಂದು ನನಗೆ ಗೊತ್ತು. ಕಾರಿನಲ್ಲಿ ಕುಳಿತಿರುವ ಚಾಸಾ-6 ರವರಿಗೂ ಮುಖಕ್ಕೆ ಮತ್ತು ಕೈಗೆ ಗಾಯಗಳಾಗಿರುತ್ತವೆ ಎಂಧರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪೋಲಿಸರಿಗೆ ಫಿರ್ಯಾದಿ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ** ಶ್ರೀ ಆರ್.ಜೆ.ಪಿ. **ವಕೀಲರಿಂದ**

ಘಟನೆ ನಡೆದ ಸಮಯದಲ್ಲಿ ನಾನು ನನ್ನ ಮನೆಯಲ್ಲಿದ್ದೆನು. ಆಳಂದದಿಂದ ಗುಲಬರ್ಗಾ ರಸ್ತೆ ರಾಜ್ಯ ಮುಖ್ಯ ರಸ್ತೆ ಇರುತ್ತದೆ ಎಂದರೆ ಸರಿ. ಅಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂಧರೆ ಸರಿ. ಕೊಡಲ ಹಂಗರಗಾ ಗ್ರಾಮ ಸದರಿ ರಸ್ತೆಯ ಎರಡೂ ಬದಿಗೆ ಇರುತ್ತದೆ ಎಂದರೆ ಸರಿ, ರಸ್ತೆಯ ಎರಡೂ ಪಕ್ಕದ ಬದಿಯಲ್ಲಿ ಅಂಗಡಿ ಮುಂಗಟ್ಟುಗಳು ಇವೆ ಎಂದರೆ ಸರಿ. ಸದರಿ ರಸ್ತೆಯ ಮೇಲೆ ಕೊಡಲ ಹಂಗರಗಾ ಗ್ರಾಮದ ಹತ್ತಿರ ಎರಡೂ ಕಡೆ ರಸ್ತೆ ತಡೆ ಇವೆ ಎಂಧರೆ ಸರಿ. ಸದರಿ ರಸ್ತೆಗೆ ಅಡ್ಡಲಾಗಿ ರಸ್ತೆ ತಡೆಗಳು ಇದ್ದ ಕಾರಣ ಎಲ್ಲಾ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ಕೊಡಲ ಹಂಗರಗಾ ಗ್ರಾಮದ ಬಸ್ ನಿಲ್ದಾಣದಿಂದ ಘಟನೆ ನಡೆದ ಸ್ಥಳ ಸುಮಾರು 50-60 ಫೀಟು ಅಂತರ ಇದೆ. ರಸ್ತೆ ತಡೆಗಳು ಕೊಡಲ ಹಂಗರಗಾ ಗ್ರಾಮದ ಬಸ್ ನಿಲ್ದಾಣದಿಂದ 50-60 ಫೀಟು ಅಂತರದಲ್ಲಿವೆ. ಘಟನೆ ನಡೆದ ನಂತರ ಪೋಲಿಸ್ ಠಾಣೆಗೆ 10.00 ಗಂಟೆ ಸುಮಾರಿಗೆ ಹೋಗಿರುತ್ತೇನೆ, ನನ್ನ ಜೊತೆಗೆ ನಮ್ಮೂರಿನ ಜನರು ಇದ್ದರು. ನಮ್ಮ ಊರಿನ ಜನರಾದ ಚಾಸಾ-7 ರಿಂದ 9 ರವರು ಇದ್ದರು. ಪೋಲಿಸರಿಗೆ ಮಾಹಿತಿಯನ್ನು ಊರಿನ ಜನರು ನೀಡಿರುತ್ತಾರೆ. ನಾವು ಪರಿಹಾರ ಕೇಳಿ ಅರ್ಜಿಯನ್ನು ಸಲ್ಲಿಸಿರುತ್ತೇವೆ. ನಾನು ನನ್ನ ಫಿರ್ಯಾದಿಯಲ್ಲಿ ಆರೋಪಿಯಲ್ಲಿ ಅತಿ ಜೋರಾಗಿ ನಿರ್ಲಕ್ಷತನ ದಿಂದ ತನ್ನ ವಾಹನವನ್ನು ಓಡಿಸಿರುತ್ತಾನೆ ಎಂದು ತಪ್ಪಾಗಿ ಬರೆಸಿರುತ್ತೇನೆ ಎಂಧರೆ ಸರಿ ಅಲ್ಲ. ಆರೋಪಿ ತಪ್ಪಿನಿಂದ ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿ ಅಲ್ಲ. ನನ್ನ ತಾಯಿ ಹೃದಯ ರೋಗದಿಂದ ಮೂರ್ಚೆ ಹೋಗಿ ಬಿದ್ದು ತೀರಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲ. ಪರಿಹಾರದ ಹಣವನ್ನು ಪಡೆದುಕೊಳ್ಳುವುದಕ್ಕೋಸ್ಕರ ವೈದರು, ಪೋಲಿಸರೊಂದಿಗೆ ಮಿಲಾಪಿಯಾಗಿ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ, ಖೊಟ್ಟಿ ಕಾಗದ ಪತ್ರಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಘಟನೆಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ ಅಲ್ಲ. ಪರಿಹಾರ ಹಣವನ್ನು ಪಡೆದುಕೊಳ್ಳುವುದಕ್ಕೋಸ್ಕರ ಸುಳ್ಳು ಫಿರ್ಯಾದಿಯನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ